ಬಿಟ್ಟು, ಲಕ್ಷ್ಮಿತರು ಒಂದನ್ನೇ ಅವಲಂಬಿಸಲು ಸ್ವಯಂ ನಿರ್ಧಾರ ತೆಗೆದುಕೊಳ್ಳಬೇಡಿ. ರಾಜುವಿನ ತಂದೆಗೆ ಅಲೋಪತಿಯ ಎಲ್ಲ ಸಾಧ್ಯತೆಗಳೂ ಮುಚ್ಚಿದ್ದವು. ನನ್ನ ಗೆಳತಿ ಮಾಧವಿ ಅಲೋಪತಿಯ ಚಿಕಿತ್ಸೆ ಪಡೆದಿದ್ದಳು. ಆಕೆ ಎರಡನೇ ಬಾರಿ ಚಿಕಿತ್ಸೆ ಪಡೆದ ಆಸ್ಪತ್ರೆ ಮತ್ತು ಕ್ಯಾನ್ಸರ್ ತಜ್ಞರ ಬಗ್ಗೆ ನನಗೆ ತುಂಬಾ ಗೌರವವಿದೆ. ಅವರು ಅಂದು ಭರವಸೆ ನೀಡದಿದ್ದರೂ ತಮ್ಮೆಲ್ಲ ಶ್ರಮ ಮತ್ತು ಸಂಶೋಧನಾ ತಜ್ಞತೆಯನ್ನು ಜೊತೆಗೂಡಿಸಿ ಆಕೆಗೆ ಚಿಕಿತ್ಸೆ ನೀಡಿದ್ದರು. ಇಂದು ಮಾಧವಿ 'ಕ್ಯಾನ್ಸರ್ ಫ್ರೀ' ಇರಲು ಅವರ ಚಿಕಿತ್ಸೆ ಮತ್ತು ಪೂರಕ ಪಾತ್ರ ವಹಿಸಿದ ಲಕ್ಷ್ಮಿತರು ಎರಡೂ ಕಾರಣ ಎಂಬುದು ನನ್ನ ನಂಬುಗೆ.

ಆದರೆ ನಿಮಗೆ ಇಷ್ಟು ಹೇಳಲು ಇಚ್ಛಿಸುತ್ತೇನೆ, ಸಿಮರೋಬಾದಲ್ಲಿ ಕ್ಯಾನ್ಸರ್ ವಿರೋಧಿ ಗುಣ ಇರುವುದರ ಬಗ್ಗೆ ಬಹಳಷ್ಟು ಸಂಶೋಧನೆಗಳು ನಡೆಯುತ್ತಿವೆ. ನಾನು ಪರಾಮರ್ಶಿಸಿದ ಸಂಶೋಧನಾ ಪ್ರಬಂಧಗಳಲ್ಲಿ ಒಂದೆರಡನ್ನು ಇಲ್ಲಿ ಉದಾಹರಿಸುತ್ತಿದ್ದೇನೆ.

## ಲಕ್ಷ್ಮಿತರು ಸಂಶೋಧನೆ

ಪುರಾತನ ಕಾಲದಿಂದಲೂ ಗುಡ್ಡಗಾಡು ಜನರು ಸಿಮರೋಬಾದ ಎಲೆ ಮತ್ತು ತೊಗಟೆಗಳನ್ನು ಔಷಧಿಯಾಗಿ ಬಳಸುತ್ತಾ ಬಂದಿದ್ದಾರೆ. ಸಿಮರೋಬಾಗೆ 'ಡೀಸೆಂಟ್ರಿ ಬಾರ್ಕ್' ಎಂಬ ಹೆಸರೂ ಇದೆ. ಕಾರಣ, ಇದರ ತೊಗಟೆಯಲ್ಲಿ ಭೇದಿ, ಆಮಶಂಕೆಯನ್ನು ನಿವಾರಿಸುವ ಪ್ರಬಲ ಗುಣವಿದೆ. 1713ರಲ್ಲಿ ಗಯಾನಾದಿಂದ ಮೊದಲ ಬಾರಿಗೆ ಈ ಮರವನ್ನು ಫ್ರಾನ್ಸ್ ದೇಶಕ್ಕೆ ಆಮಶಂಕೆಯ ನಿವಾರಣೆಗೆಂದು ಆಮದು ಮಾಡಿಕೊಂಡಿದ್ದರು. ಫ್ರಾನ್ಸ್‌ನಲ್ಲಿ 1718ರಿಂದ 1725ರ ನಡುವೆ ಸ್ಫೋಟಿಸಿದ 'ಡೀಸೆಂಟ್ರಿ ಮಹಾಮಾರಿ'ಯ ಸಮಯದಲ್ಲಿ ಸಿಮರೋಬಾದ ತೊಗಟೆಯನ್ನು ಚಿಕಿತ್ಸೆಗೆ ಸಮರ್ಥವಾಗಿ ಬಳಸಲಾಗಿತ್ತು.

ಸಿಮರೋಬಾದ ಎಲೆಗಳಲ್ಲಿ, ಕಾಂಡದಲ್ಲಿ, ತೊಗಟೆಯಲ್ಲಿ, ಬೀಜಗಳಲ್ಲಿ ವೈರಸ್ ವಿರೋಧಿ, ಬ್ಯಾಕ್ಟೀರಿಯಾ ವಿರೋಧಿ, ಪ್ರೋಟೊಜೋವಾ ವಿರೋಧಿಯಾದ ಪ್ರಕೃತಿದತ್ತ ರಾಸಾಯನಿಕಗಳಿವೆ. ಅವು ಮಲೇರಿಯಾ, ಅಮೀಬಿಯ ನಿರೋಧಿಸಬಲ್ಲವು. ರಕ್ತಸ್ರಾವವನ್ನು ತಡೆಯಬಲ್ಲವು. ಜ್ವರವನ್ನು ಇಳಿಸಬಲ್ಲವು. ಎಲ್ಲಕ್ಕಿಂತ ಮುಖ್ಯವಾಗಿ ಸಿಮರೋಬಾದಲ್ಲಿ ಕ್ಯಾನ್ಸರ್ ವಿರೋಧಿ ಗುಣವಿದೆ.

ಸಿಮರೋಬಾದಲ್ಲಿರುವ ಮುಖ್ಯ ರಾಸಾಯನಿಕಗಳ ಗುಂಪನ್ನು 'ಕ್ವಾಸಿನಾಯ್ಡ್ಸ್' (quassinoids) ಎಂದು ಕರೆಯುತ್ತಾರೆ. ಕ್ವಾಸಿನಾಯ್ಡ್‌ಗಳು, ಟ್ರೈಟರ್‌ಪೀನ್ (triterpene) ಎಂಬ ರಾಸಾಯನಿಕ ಕುಟುಂಬಕ್ಕೆ ಸೇರುತ್ತವೆ. ಅನೇಕ ಗಿಡ ಮರಗಳಲ್ಲಿ ಕ್ವಾಸಿನಾಯ್ಡ್‌ಗಳಿದ್ದು, ಅವು ವಿಜ್ಞಾನಿಗಳಿಗೆ ಚೆನ್ನಾಗಿ ತಿಳಿದಿರುವ ಸಸ್ಯಜನ್ಯ ರಾಸಾಯನಿಕಗಳು. ಆ ರಾಸಾಯನಿಕಗಳ ಪ್ರೋಟೊಜೋವಾ ವಿರೋಧಿ ಹಾಗೂ ಮಲೇರಿಯಾ ವಿರೋಧಿ ಗುಣ ಬಹಳಷ್ಟು ವರ್ಷಗಳಿಂದ ದಾಖಲಾಗಿದೆ. ಸಿಮರೋಬಾದಲ್ಲಿ ಕಂಡು ಬರುವ ಅನೇಕ ಕ್ವಾಸಿನಾಯ್ಡ್‌ಗಳಾದ ಅಲಾಂಥಿನನ್, ಗ್ಲಾಕರುಬಿನನ್ನ, ಹೋಲಾಕ್ಯಾನ್‌ಥೋನ್ ಮುಂತಾದವು ಆ ಗಿಡದ ಔಷಧೀಯ ಗುಣಕ್ಕೆ ಕಾರಣವಾದ ಮೂಲ ಘಟಕಗಳು ಎಂದು ತಿಳಿಯಲಾಗಿದೆ. ಅವುಗಳನ್ನು ಆಂಟಿಪ್ರೋಟೋಜೋವಾ, ಆಂಟಿ ಮಲೇರಿಯಾ, ಆಂಟಿಅಮೀಬಿಕ್ ಅಲ್ಲದೆ, ಕ್ಯಾನ್ಸರ್ ಕೋಶಗಳನ್ನು ನಾಶ ಮಾಡುವ ರಾಸಾಯನಿಕಗಳು ಎಂದು ಇತ್ತೀಚಿನ ವರ್ಷಗಳಲ್ಲಿ ಗುರುತಿಸಿದ್ದಾರೆ.

ಇಸವಿ 2005ರಲ್ಲಿಯೇ ಫ್ಲಾರಿಡಾದಲ್ಲಿ ಬೆಳೆದ ಸಿಮರೋಬಾದ ಮೇಲೆ ಷಿಕಾಗೋದ ಇಲ್ಲಿನಾಯ್ಸ್ ವಿಶ್ವವಿದ್ಯಾಲಯದ ಯೋಜನೆಯಡಿ, ಜೋಸ್ ಫಾಸ್ಟೋ ರಿವೆರೋ ಕ್ರುಜ್ ಮತ್ತು ತಂಡ ಸಂಶೋಧನೆ ನಡೆಸಿದೆ. 'ಸೈಟೋಟಾಕ್ಸಿಕ್ ಕಾನ್‌ಸ್ಟಿಟ್ಯುಯೆಂಟ್ಸ್ ಆಫ್ ದಿ ಟ್ವಿಗ್ಸ್ ಆಫ್ ಸಿಮರೋಬಾ' ಎಂಬ ಸಂಶೋಧನಾ ಲೇಖನದಲ್ಲಿ, ಮಾನವರ ಕ್ಯಾನ್ಸರ್ ಕೋಶಗಳ ಮೇಲೆ ಸಿಮರೋಬಾ 'ಸೈಟೋಟಾಕ್ಸಿಕ್ ಆಕ್ಟಿವಿಟಿ' ಪ್ರದರ್ಶಿಸಿದ್ದನ್ನು ತಿಳಿಸುತ್ತದೆ. ಅಂದರೆ ಕ್ಯಾನ್ಸರ್ ಕೋಶಗಳನ್ನು ನಾಶ ಮಾಡಬಲ್ಲ ಕ್ರಿಯೆಯನ್ನು ಸಿಮರೋಬಾ ಪ್ರದರ್ಶಿಸಿತ್ತು.

2008ರಲ್ಲಿ ಪ್ರಕಟವಾದ ಚೀನಾದ ಸೆಂಟ್ರಲ್ ಸೌಥ್ ಯೂನಿವರ್ಸಿಟಿಯ, ಜಿಯಾಂಗ್, ಜುವೋ ಅವರ 'ಕ್ಯಾಂಥೀನ್6ಒನ್ ಆಲ್ಕಲಾಯ್ಡ್ಸ್ ಫ್ರಂಮ್ ಕ್ವಾಸಿಯೋಡಸ್ ಅಂಡ್ ದೆರ್ ಸೈಟೋಟಾಕ್ಸಿಕ್ ಆಕ್ಟಿವಿಟಿ' ಸಂಶೋಧನಾ ಲೇಖನ, ಸಿಮರೋಬಾಸಿಯ ಕುಟುಂಬಕ್ಕೆ ಸೇರಿದ ಮರದ ಕಾಂಡದಿಂದ ತೆಗೆದು ಬೇರ್ಪಡಿಸಿದ ಸಂಯುಕ್ತಗಳಲ್ಲಿ ಅಧಿಕವಾದ ಮಾನವ ಕ್ಯಾನ್ಸರ್



ಲಕ್ಷ್ಮಿತರುವಿನ ಹಣ್ಣುಗಳು